ಅಧ್ಯಕ್ಷರು: ನಿಲುವಳಿ ಸೂಚನೆ ಮುಖ್ಯವೋ ಅಥವಾ ಯಾವುದು ಮುಖ್ಯ ಎನ್ನತಕ್ಕಂಥದನ್ನು ತಾವೇ ಹೇಳಿ? ಇದಕ್ಕೆ ನಿಮ್ಮ ನಾಯಕರು ಒಪ್ಪಿಕೊಂಡರೆ ನನ್ನದೇನು ಅಭ್ಯಂತರವಿಲ್ಲ.

ಶ್ರೀ ಎ.ಮಂಜು: ಮಾನ್ಯ ಅಧ್ಯಕ್ಷರೆ, ಹೊಗೆಸೊಪ್ಪು ಬೆಳೆಗಾರರ ಸಮಸ್ಯೆ ಬಗ್ಗೆ ನಾವು ಇವತ್ತು ಪ್ರಸ್ತಾಪ ಮಾಡಿದ್ದೇವೆ.

ಅಧ್ಯಕ್ಷರು: ತಾವೆಲ್ಲರೂ ಈಗಾಗಲೇ ಏನು ಪ್ರಸ್ತಾಪ ಮಾಡಿದ್ದೀರಿ, ಆ ಎಲ್ಲಾ ವಿಷಯವನ್ನು ಮಾನ್ಯ ಮುಖ್ಯಮಂತ್ರಿಯವರು ಸನ್ಮಾನ್ಯ ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಿ ಹೇಳುತ್ತಾರೆಂದು ಮಾನ್ಯ ಸಚಿವರು ಈಗಾಗಲೇ ಹೇಳಿದ್ದಾರೆ. ಮತ್ತೆ ಇನ್ನೇನು ಬೇಕು?

ಶ್ರೀ ಎ.ಮಂಜು: ಬರ ಪರಿಹಾರಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಯವರು ದೆಹಲಿಗೆ ಹೋಗಿದ್ದಾರೆ.

(ಗೊಂದಲ)

ಅಧ್ಯಕ್ಷರು: ದಯವಿಟ್ಟು ನಾನು ಹೇಳುವುದನ್ನು ಸ್ವಲ್ಪ ಕೇಳಿ. ಮೊನ್ನೆ ದಿವಸ ಈ ವಿಷಯ ಜರೂರು ಇದೆಯೆಂದು ತಾವು ನನ್ನ ಗಮನಕ್ಕೆ ತಂದನಂತರ, ನಾನು ಮಾನ್ಯ ಕೃಷಿ ಸಚಿವರಿಗೂ ಮತ್ತು ಮಾನ್ಯ ಶಿವಣ್ಣನವರಿಗೆ ಹೇಳಿದ್ದೇನೆ. ಆದ್ದರಿಂದ ಈ ವಿಷಯವನ್ನು ಅವರಿಗೆ ಹೇಳಿ ಕಳುಹಿಸಿದ್ದಾರೆ. ಈ ವಿಷಯವನ್ನು ತಾವು ಹೇಳಿಲ್ಲ. ಆದರೆ, ನಾನು ಅವರ ಗಮನಕ್ಕೆ ತಂದಿದ್ದೇನೆ. ಆದರೆ, ಇದು ಅವರಿಗೆ ಹೇಗೆ ಗೊತ್ತು ಎಂದು ಕೇಳತಕ್ಕಂಥದ್ದು ಸರಿಯಲ್ಲ. ಇಷ್ಟು ಹೊತ್ತಿಗೆ ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಿ ತಮ್ಮ ಬೇಡಿಕೆಯನ್ನು ಅವರ ಮುಂದಿಟ್ಟಿರುತ್ತಾರೆ. ನಾನು ಇಷ್ಟೆಲ್ಲಾ ಹೇಳಿದರೂ ಕೂಡ ಅವರಿಗೆ ಹೇಗೆ ಗೊತ್ತು ಎಂದು ಕೇಳಿದರೆ ಏನರ್ಥ?

ಶ್ರೀ ಎಂ.ಶಿವಣ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂಜುರವರಿಗೆ ಮತ್ತು ಸನ್ಮಾನ್ಯ ಮುಖ್ಯಮಂತ್ರಿಯವರಿಗೂ ಸಹ ರೈತರ ಸಮಸ್ಯೆ ಚೆನ್ನಾಗಿ ಗೊತ್ತಿದೆ. ಈಗಾಗಲೇ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವಂತೆ, ದಿನಾಂಕ 13.07.2002ರಂದು ಪಾರ್ಲಿಮೆಂಟ್ ಉಪ ಸಮಿತಿ ಕರ್ನಾಟಕ ರಾಜ್ಯಕ್ಕೆ ಭೇಟಿ ನೀಡಿದಂಥ ಸಂದರ್ಭದಲ್ಲಿ ಮಾನ್ಯ ಸದಸ್ಯರೂ ಕೂಡ ಭೇಟಿ ಮಾಡಿ ಈ ಎಲ್ಲಾ ವಿಚಾರಗಳನ್ನು ಅವರ ಮುಂದೆ ಪ್ರಸ್ತಾಪ ಮಾಡಿದ್ದಾರೆ. ಅಲ್ಲಿ ಏನು ನಡೆಯುತ್ತಿದೆ ಎನ್ನತಕ್ಕಂಥ ಎಲ್ಲಾ ವಿಚಾರಗಳು ಮಾನ್ಯ ಸದಸ್ಯರಿಗೆ ಗೊತ್ತಿದೆ. ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ನಮ್ಮೆಲ್ಲರ ಪರವಾಗಿ ಮಾನ್ಯ ಮುಖ್ಯಮಂತ್ರಿಯವರು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುತ್ತಿರುವುದರಿಂದ ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಕೇಂದ್ರ ಸರ್ಕಾರ ಸದರಿ ಮಂಡಳಿಗೆ ನಿರ್ದೇಶನ ಕೊಡುತ್ತದೆ ಎನ್ನತಕ್ಕಂಥ ವಿಶ್ವಾಸ ನನಗೆ ಇದೆ ಎಂಬುದನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ವಿಷಯ: ಉ) ಮೈಸೂರು ಮಾಹಾನಗರದಲ್ಲಿ ರಸ್ತೆ ಮತ್ತು ಫುಟ್‌ಪಾತ್‌ಗಳನ್ನು ಕೇಬಲ್ ಅಳವಡಿಸಲು ಅಗೆಯುತ್ತಿರುವ ಬಗ್ಗೆ.

ಶ್ರೀ ಎ.ರಾಮದಾಸ್ (ಕೃಷ್ಣರಾಜ): ಮಾನ್ಯ ಅಧ್ಯಕ್ಷರೆ, ಮಾನ್ಯ ನಗರಾಭಿವೃದ್ಧಿ ಮಂತ್ರಿಯವರಿಗೆ ಒಂದು ಪ್ರಶ್ನೆ ಕೇಳಬೇಕೆಂದು ಕಳೆದ ಮೂರು ದಿವಸಗಳಿಂದ ನಾನು ಕಾಯುತ್ತಿದ್ದೆ. ಆ ಪ್ರಶ್ನೆ ಏನೆಂದರೆ, ಭಾರತ್ ಟೆಲಿಕಾಂ ನವರು ಮತ್ತು ರಿಲೆಯನ್ಸ್ ಕಂಪನಿಯವರು ಹಾಗೂ ಟಾಟಾ ಟೆಲಿ ಕಮ್ಯುನಿಕೇಟ್ ಈ ಮೂರು ಸಂಸ್ಥೆಗಳು ಮೈಸೂರು ಮಹಾನಗರದಲ್ಲಿರತಕ್ಕಂಥ

ಸುಮಾರು 115 ಕಿ.ಮೀ. ರಸ್ತೆ ಹಾಗೂ ಬೇವಿಂಗ್ ಹಾಕಿರತಕ್ಕಂಥ ಫುಟ್‌ಪಾತ್‌ನ್ನು ಅಗೆದು ಅಲ್ಲಿ ಕೇಬಲ್ ಅಳವಡಿಸುವುದಕ್ಕೋಸ್ಕರ ಸರ್ಕಾರದಿಂದ ಪರ್ಮಿಷನ್ ಪಡೆದುಕೊಂಡಿದ್ದೇವೆಂಬ ಅಂಶವನ್ನು ಹೇಳುತ್ತಿದ್ದಾರೆ. ಹಾಗೆಯೇ, ಈಗಾಗಲೇ ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್ ಮೂಲಕ ಸಾಲ ಪಡೆದುಕೊಂಡು ನಿರ್ಮಾಣ ಮಾಡಿರತಕ್ಕಂಥ ಸುಮಾರು 45 ಕಿ.ಮೀ.ರಸ್ತೆಯ ಜಾಗವನ್ನು ಮತ್ತು ನಾಲ್ಕೈದು ತಿಂಗಳ ಹಿಂದೆ ಹೊಸದಾಗಿ ಆಸ್ಫಾಲ್ಟಿಂಗ್ ಮಾಡಿರತಕ್ಕಂಥ ಜಾಗವನ್ನು ಮತ್ತು ಬೇವಿಂಗ್ ಹಾಕಿರತಕ್ಕಂಥ ಫುಟ್‌ಪಾತ್‌ನ್ನು ಈಗಾಲೇ ಶೇಕಡ 50 ರಷ್ಟು ಅಗೆದಿದ್ದಾರೆ. ಅಗೆಯುವಂಥ ಸಂದರ್ಭದಲ್ಲಿ ವಾಟರ್ ಲೈನ್ ಮತ್ತು ಯುಜಿಡಿ ಲೈನ್ ಕೂಡ ಹಾಳಾಗಿರತಕ್ಕಂಥ ಪ್ರಕರಣಗಳು ವರದಿಯಾಗಿವೆ. ನಗರಪಾಲಿಕೆಯವರು ಮತ್ತು ಸದರಿ ಸಂಸ್ಥೆಗಳು ಪರಸ್ಪರ ಒಪ್ಪಂದ ಮಾಡಿಕೊಳ್ಳತಕ್ಕಂಥ ಸಂದರ್ಭದಲ್ಲಿ, ರಸ್ತೆ ಮತ್ತು ಫುಟ್‌ಪಾತ್ ಮೊದಲು ಯಾವ ಸ್ಥಿತಿಯಲ್ಲಿತ್ತೋ, ಅದೇ ಸ್ಥಿತಿಯಲ್ಲಿರುವಂತೆ ಅವರು ಮಾಡಿಕೊಡಬೇಕಾಗಿತ್ತು. ಇದಕ್ಕೆ ಸಂಬಂಧಪಟ್ಟಂತೆ ಆಯುಕ್ತರು ಮತ್ತು ಸಂಬಂಧಪಟ್ಟಂಥ ಅಧಿಕಾರಿಗಳು ಸ್ಯಾಟಿಸ್‌ಫೈ ಆದನಂತರ ಇದಕ್ಕೆ ಪರ್ಮಿಷನ್ ಕೊಡತಕ್ಕಂಥ ಒಂದು ವ್ಯವಸ್ಥೆ ಇತ್ತು. ಆದರೆ, ಈಗ ಯಾರ ಪರ್ಮಿಷನ್ ಮೇಲೆ ಇದು ಬದಲಾವಣೆಯಾಗಿದೆ ಎನ್ನತಕ್ಕಂಥದ್ದು ನಮಗೆ ಗೊತ್ತಿಲ್ಲ. ಈಗ ಅವರು 50 ಲಕ್ಷ ರೂಪಾಯಿಗಳನ್ನು ನಗರಪಾಲಿಕೆಯವರಿಗೆ ಪೇಮೆಂಟ್ ಮಾಡುತ್ತೇವೆ, ಎಂದು ಹೇಳಿ ಮೊನ್ನೆ ದಿವಸ 25 ಲಕ್ಷ ರೂಪಾಯಿಗಳ ಡಿ.ಡಿ.ಯನ್ನು ಕಳುಹಿಸಿಕೊಟ್ಟಿದ್ದಾರೆ. ಅದನ್ನು ರಿಯಲೈಸ್ ಮಾಡಿಕೊಳ್ಳಬೇಡಿ ಎಂದು ನಾವು ಮನವಿ ಮಾಡಿಕೊಂಡಿದ್ದೇವೆ. ಅಲ್ಲಿರತಕ್ಕಂಥ ರಸ್ತೆಗಳನ್ನು ಪೂರ್ಣವಾಗಿ ಅಗೆದಿರುವುದರಿಂದ ಇಡೀ ಮೈಸೂರು ನಗರದ ವಾತಾವರಣ ಹಾಳಾಗಿರುವುದರ ಜೊತೆಗೆ ಈಗ ತಾನೇ ಮಾಡಿರತಕ್ಕಂಥ ರಸ್ತೆಗಳೂ ಸಹ ಪೂರ್ಣವಾಗಿ ಹಾಳಾಗಿದೆ. ಈ ಕೆಲಸ ಮಾಡಲು ಸದರಿ ಕಂಪನಿಗಳಿಗೆ ಪರ್ಮಿಷನ್ ಕೊಡಬೇಡಿ ಎಂದು ನಾನು ಹೇಳುವುದಿಲ್ಲ, ಪರ್ಮಿಷನ್ ಕೊಡತಕ್ಕಂಥ ಅವಶ್ಯಕತೆ ಇದೆ. ಆದರೆ ಅಲ್ಲಿರತಕ್ಕಂಥ ರಸ್ತೆ ಮತ್ತು ಫುಟ್‌ಪಾತ್‌ನ್ನು ಯಥಾಸ್ಥಿತಿಗೆ ತರುವುದಕ್ಕೋಸ್ಕರ ಸರ್ಕಾರ ಏನು ಕ್ರಮ ಕೈಗೊಂಡಿದೆ ಎನ್ನತಕ್ಕಂಥದನ್ನು ಮಾನ್ಯ ಸಚಿವರು ತಿಳಿಸಬೇಕು. ಇದಕ್ಕೆ ಸಂಬಂಧಪಟ್ಟಂತೆ ಅಲ್ಲಿನ ಜನರಲ್ಲಿರತಕ್ಕಂಥ ಭಾವನೆ ಮತ್ತು ಇದರ ಜೊತೆಗೆ ಒಂದು ವಾರದ ಹಿಂದೆ ಇಲ್ಲಿ ಆಗಿರತಕ್ಕಂಥ ನಾಲ್ಕು ದೊಡ್ಡ ಅಪಘಾತಗಳು ಆಗಿವೆ. ಇದನ್ನು ಸರಿ ಮಾಡುವುದಕ್ಕೋಸ್ಕರ ಸರ್ಕಾರ ಏನು ಕ್ರಮ ಕೈಗೊಂಡಿದೆ ಎನ್ನತಕ್ಕಂಥದ್ದನ್ನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಡಿ.ಕೆ.ಶಿವಕುಮಾರ್ (ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ರಾಮದಾಸ್‌ರವರು ಮೈಸೂರು ನಗರಕ್ಕೆ ಸಂಬಂಧಪಟ್ಟ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ, ಬೆಂಗಳೂರು ನಗರದಲ್ಲಿ ಕಾರ್ಪೊರೇಷನ್‌ನಲ್ಲಿಯೂ ಕೂಡ ಇದೇ ಸಮಸ್ಯೆ ಇದೆ. ಇದರಿಂದ ರಸ್ತೆ ಮತ್ತು ಒಳಚರಂಡಿ ವ್ಯವಸ್ಥೆ ಕುಡಿಯುವ ನೀರಿನ ವ್ಯವಸ್ಥೆ ಹಾಳಾಗುತ್ತಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ನಾನು ಕಾರ್ಪೊರೇಷನ್ ಮತಿಯಿಂದ ಇದಕ್ಕೆ ಸಂಬಂಧಪಟ್ಟಂಥ ವರದಿಯನ್ನು ತರಿಸಿಕೊಂಡು ಸೋಮವಾರ ಈ ಸದನದಲ್ಲಿ ಹೇಳಿಕೆ ಕೊಡುತ್ತೇನೆ.

ವಿಷಯ: ಊ) ಸಿಂಧನೂರಿನಲ್ಲಿ ಕೆರೆ ಒಡೆದು ಭೂ ಕುಸಿತವಾಗಿರುವ ಬಗ್ಗೆ.

ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು): ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಏನೆಂದರೆ, ಸಿಂಧನೂರಿನಲ್ಲಿರತಕ್ಕಂಥ ಕೆರೆ ಒಡೆದು ಭೂ ಕುಸಿತವಾಗಿದೆ. ಹಾಗೆಯೇ ಇದರಿಂದ